ಓ. ಎಸ್. ನಂಃ218/2014

ಡಿ ಡಬ್ಲ್ಯೂಃ 3

**ದಿ.4-12-2015 ರಂದು ಸಾಕ್ಷಿದಾರರನ್ನು ಪುನಃ ಕರೆಸಿ ಪ್ರಮಾಣವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಶ್ರೀ.ಹೆಚ್ ಎಂ ಆರ್ ವಕೀಲರಿಂದಃ-**

ನಾನು ಬಿ.ಎ. ವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ವಾದಿ ಹಾಗೂ ಆತನ ಸಹೋದರರು 30-40 ವರ್ಷಗಳ ಹಿಂದೆ ವಿಭಾಗ ಮಾಡಿಕೊಂಡಿರುವುದಾಗಿ ನಾನು ತಿಳಿದುಕೊಂಡಿರುತ್ತೇನೆ. ಆ ಸಮಯದಲ್ಲಿ ನಾನು ಹುಟ್ಟಿರಲಿಲ್ಲ. ಸದರಿ ವಿಭಾಗ ಸಮಯದಲ್ಲಿ ಯಾರು ಯಾರು ಹಾಜರಿದ್ದರು ನನಗೆ ತಿಳಿದಿಲ್ಲ. ವಾದಿ ಕುಟುಂಬಕ್ಕೆ ಸು.30-40 ಎಕರೆ ಜಮೀನು ಇತ್ತು. ಸದರಿ ಸ್ವತ್ತುಗಳ ಸರ್ವೇ ನಂ.ನನಗೆ ತಿಳಿದಿಲ್ಲ, ಸಾಕ್ಷಿ ಮುಂದುವರೆದು ವಾದಿ ಕುಟುಂಬಕ್ಕೆ ನನ್ನ ಸ್ವತ್ತಿನ ಬಳಿ ಸರ್ವೇ ನಂ.11 ಇರುತ್ತದೆ ಎಂದು ನುಡಿಯುತ್ತಾರೆ. ಸದರಿ ಸರ್ವೇ ನಂ.11 ಒಟ್ಟು ಅಂದಾಜು ಸು.8 ಎಕರೆ ಇರುತ್ತದೆ. ವಾದಿ ಕುಟುಂಬದಲ್ಲಿ ಆದ ವಿಭಾಗದ ಸಂಪೂರ್ಣ ಮಾಹಿತಿ ನನಗೆ ಇರುವುದಿಲ್ಲ.

ದಾವಾ ಸರ್ವೇ ನಂ.ನಲ್ಲಿ ನಂಜುಂಡಪ್ಪನಿಗೆ ಎಷ್ಟು ಎಕರೆ ಜಮೀನು ಬಂದಿರುತ್ತದೆ ಎಂದರೆ ಸಾಕ್ಷಿ ಆತನಿಗೆ 30 ಗುಂಟೆ ಜಮೀನು ಬಂದಿದ್ದು ಅದನ್ನು ಆತ ಕಲ್ಲಪ್ಪನಿಗೆ ಮಾರಾಟ ಮಾಡಿರುತ್ತಾನೆ ಎಂದು ನುಡಿಯುತ್ತಾರೆ. ಸದರಿ 30 ಗುಂಟೆ ಜಮೀನಿಗೆ ಚಕ್ಕುಬಂದಿ ಪೂರ್ವ-ತಿಪ್ಪೇಶಪ್ಪನ ಜಮೀನು, ಪಶ್ಚಿಮ- ಕಲ್ಲಪ್ಪನ ಜಮೀನು, ಉತ್ತರ-ರುದ್ರಪ್ಪನ ಜಮೀನು, ದಕ್ಷಿಣ-ಈಶ್ವರಪ್ಪನ ಜಮೀನು. ಸದರಿ ಸ್ವತ್ತಿನ ಸರ್ವೇ ಮಾಡಿಸಿದ ಸಮಯದಲ್ಲಿ ನಾನು ಎಂದೂ ಸ್ಥಳದಲ್ಲಿ ಇರಲಿಲ್ಲ. ಸದರಿ ಸ್ವತ್ತನ್ನು ನಂಜುಂಡಪ್ಪನ ಮಗ ಶಿವಮೂರ್ತಪ್ಪ ಕಲ್ಲಪ್ಪನ ಮಕ್ಕಳಿಗೆ ಕ್ರಯಕ್ಕೆ ನೀಡಿರುತ್ತಾನೆ. ಸದರಿ ಕ್ರಯಪತ್ರವನ್ನು ನಾನು ನೋಡಿರುವುದಿಲ್ಲ. ಸದರಿ ಕ್ರಯಪತ್ರದ ದಿನಾಂಕ ನನಗೆ ತಿಳಿದಿಲ್ಲ.

ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ತಿಳಿಸಿರುವಂತೆ ಕಲ್ಲಪ್ಪ, ರುದ್ರಪ್ಪ ಹಾಗೂ ಈಶ್ವರಪ್ಪ ಒಟ್ಟು ಕುಟುಂಬದಲ್ಲಿ ಯಾವ ಸಾಲಿನಿಂದ ಯಾವ ಸಾಲಿನವರೆಗೆ ಉಳಿದುಕೊಂಡಿರುತ್ತಾರೆ ನನಗೆ ತಿಳಿದಿಲ್ಲ.

ಪ್ರಶ್ನೆಃ ಸದರಿ 30 ಗುಂಟೆ ಜಮೀನನ್ನು ಶಿವಮೂರ್ತಪ್ಪ ಯಾವಾಗ ಮಾರಾಟ ಮಾಡಿರುತ್ತಾನೆ? ಆ ಸಮಯದಲ್ಲಿ ಕಲ್ಲಪ್ಪ, ರುದ್ರಪ್ಪ ಹಾಗೂ ಈಶ್ವರಪ್ಪ ಒಟ್ಟು ಕುಟುಂಬದಲ್ಲಿ ಇದ್ದರೇ?

ಉಃ ನನಗೆ ತಿಳಿದಿಲ್ಲ.

ದಾವಾ ಸರ್ವೇ ನಂ.ನ್ನು ಸರ್ವೇ ಮಾಡಿಸಿದ ಸಮಯದಲ್ಲಿ ನಾನು ಸ್ಥಳದಲ್ಲಿ ಇರಲಿಲ್ಲ. ದಾವಾ ಸರ್ವೇ ನಂ.ಗೆ ಸಂಬಂಧಿಸಿದಂತೆ ನಾನು ಯಾವುದೇ ದಾಖಲೆ ನೋಡಿರುವುದಿಲ್ಲ.

ವಾದಿಗೆ ದಾವಾ ಸ್ವತ್ತು 2 ಎಕರೆ ಹೇಗೆ ಬಂದಿರುತ್ತದೆ ಎಂದರೆ ಸಾಕ್ಷಿ ದಾವಾ ಸರ್ವೇ ನಂ.ನಲ್ಲಿ ವಾದಿಗೆ 1 ಎಕರೆ 26 ಗುಂಟೆ ಮತ್ತು 5 ಗುಂಟೆ ಜಮೀನು ಇದ್ದು ಅದು ಆತನಿಗೆ ತಹಸಿಲ್ದಾರವರ ಆದೇಶದಂತೆ ಬಂದಿರುತ್ತದೆ. ನಾನು ಸದರಿ ಆದೇಶವನ್ನು ನೋಡಿರುವುದಿಲ್ಲ. ತಹಸಿಲ್ದಾರವರ ಆದೇಶದಂತೆ ದಾವಾ ಸ್ವತ್ತು 2 ಎಕರೆ ಇರುತ್ತದೆ ಎಂದರೆ ಸರಿಯಲ್ಲ. ದಾವಾ ಸರ್ವೇನಂ.ನಲ್ಲಿ ವಾದಿಗೆ ಸೇರಿದ 6 ಗುಂಟೆ ಜಮೀನು ಇರುತ್ತದೆ ಎಂದರೆ ಇರಬಹುದು. ದಾವಾ ಸರ್ವೇ ನಂ.ನಲ್ಲಿ ವಾದಿಗೆ ಸೇರಿದ 1 ಎಕರೆ 26 ಗುಂಟೆ ಜಮೀನಿಗೆ ಚಕ್ಕುಬಂದಿ ಪೂರ್ವ-ಕಲ್ಲಪ್ಪ ರುದ್ರಪ್ಪನ ಜಮೀನು, ಪಶ್ಚಿಮ-ಊರಮುಂದಿನ ಮಹೇಶ್ವರಪ್ಪನ ಜಮೀನು, ಉತ್ತರ-ಪ್ರಕಾಶನ ಜಮೀನು, ದಕ್ಷಿಣ-ಕಲ್ಲಪ್ಪನ ಜಮೀನು. ಸದರಿ ವಾದಿಗೆ ಸೇರಿದ 5 ಗುಂಟೆ ಜಮೀನಿಗೆ ಚಕ್ಕುಬಂದಿ ಪೂರ್ವ-ಕಲ್ಲಪ್ಪನಿಗೆ ಸೇರಿದ ಕಣ, ಪಶ್ಚಿಮ-ರಸ್ತೆ ನಂತರ ಈಶ್ವರಪ್ಪನ ಮನೆ, ಉತ್ತರ-ಈಶ್ವರಪ್ಪನಿಗೆ ಸೇರಿದ ನಿವೇಶನ, ದಕ್ಷಿಣ- ರಸ್ತೆ. ಕಲ್ಲಪ್ಪ ರುದ್ರಪ್ಪ ಹಾಗೂ ಈಶ್ವರಪ್ಪ ಮಾಡಿಕೊಂಡ ವಿಭಾಗದ ವಿವರ ನನಗೆ ತಿಳಿದಿಲ್ಲ. ಆ ಸಮಯದಲ್ಲಿ ನಾನು ಹಾಜರಿರಲಿಲ್ಲ. ಸರ್ವೇ ನಂ.11ರಲ್ಲಿ ಈಶ್ವರಪ್ಪನಿಗೆ 2 ಎಕರೆ 15 ಗುಂಟೆ, ರುದ್ರಪ್ಪನಿಗೆ 1 ಎಕರೆ 15 ಗುಂಟೆ, ಕಲ್ಲಪ್ಪನಿಗೆ ಆತ ಕೊಂಡಿರುವ ಜಮೀನು ಸೇರಿ 2 ಎಕರೆ 1 ಗುಂಟೆ ಜಮೀನು ಇರುತ್ತದೆ. ಈ ಸಂಬಂಧ ನಾನು ಯಾವುದೇ ದಾಖಲೆ ನೋಡಿರುವುದಿಲ್ಲ. ಸದರಿಯವರು ಯಾವ ಇಸವಿಯಲ್ಲಿ ವಿಭಾಗ ಮಾಡಿಕೊಂಡಿರುತ್ತಾರೆ ನನಗೆ ತಿಳಿದಿಲ್ಲ.

ಸದರಿ ವಾದಿ ಹಾಗೂ ಆತನ ಸಹೋದರರು ಯಾವ ಸಾಲಿನಲ್ಲಿ ವಿಭಾಗ ಮಾಡಿಕೊಂಡಿರುತ್ತಾರೆ ನನಗೆ ತಿಳಿದಿಲ್ಲ. ವಾದಿ ಕುಟುಂಬದ ವಿವವರಗಳು ನನಗೆ ಏನೂ ತಿಳಿಯದೇ ಇದ್ದರೂ ಸುಳ್ಳು ಪ್ರಮಾಣಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಗೆ ಸೇರಿದ ಯಾವುದೇ ಸ್ವತುತ್ತಗಳ ದಾಖಲೆಗಳನ್ನು ನಾನು ನೋಡಿರುವುದಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

*(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಿಂದ ಬೆರಳಚ್ಚು ಪಡಿಸಲಾಯಿತು.)*

ಓ ಹೇ ಕೇ ಸ ಇದೆ,

ಅಪರ ಸಿವಿಲ್ ನ್ಯಾಯಾಧೀಶರು,
ಹೊಸದುರ್ಗ.